UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Saturday
18-04-2026

ಪ್ರಜಾವಾಣಿ
ಶನಿವಾರ • ಏಪ್ರಿಲ್ 18, 2026

ಚಂದನ ವಾಹಿನಿಯಲ್ಲಿ 'ರೈತ ರತ್ನ' ರಿಯಾಲಿಟಿ ಶೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃಷಿ ಇಲಾಖೆ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಸಹಯೋಗದಲ್ಲಿ ದೂರದರ್ಶನ ಚಂದನ ವಾಹಿನಿಯು ರೈತ ಸಾಧಕರನ್ನು ನಾಡಿನ ಜನರಿಗೆ ಪರಿಚಯಿಸಲು 'ರೈತ ರತ್ನ' ರಿಯಾಲಿಟಿ ಶೋ ರೂಪಿಸಿದೆ. ಏಪ್ರಿಲ್ 18 ರಿಂದ ಪ್ರತಿ ಶನಿವಾರ ಸಂಜೆ 6 ರಿಂದ 7 ಗಂಟೆವರೆಗೆ ಪ್ರಸಾರವಾಗಲಿದೆ' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಸರಣಿಯ ಮೊದಲ ಆವೃತ್ತಿಯಲ್ಲಿ 26 ಪ್ರಗತಿಪರ ರೈತರನ್ನು ಸಾಧಕ ಕುರ್ಚಿಯ ಮೇಲೆ ಕೂರಿಸಿ, ಅವರ ಜತೆಗೆ ಮಾತುಕತೆ ನಡೆಸಲಾಗುತ್ತದೆ. ವಿಶಿಷ್ಟ ಕೃಷಿ ಕಾರ್ಯಚಟುವಟಿಕೆಗಳು, ರೈತರ ಆವಿಷ್ಕಾರ, ರೈತ ಕುಟುಂಬದ ಸದಸ್ಯರು, ಸಂಬಂಧಿಗಳು, ಸ್ನೇಹಿತರು, ಸ್ಥಳೀಯ ಜನ ಹಂಚಿಕೊಂಡ ಅನಿಸಿಕೆಗಳು ಕಾರ್ಯಕ್ರಮಕ್ಕೆ ಮೆರಗು ನೀಡಲಿವೆ' ಎಂದು ತಿಳಿಸಿದರು.

'ಪ್ರತಿ ವಾರ ಆಯ್ದ ಒಬ್ಬ ಮಾದರಿ ರೈತ, ರೈತ ಮಹಿಳೆಯ ಕುಟುಂಬಸ್ಥರು, ಒಡನಾಡಿಗಳನ್ನು ಆಹ್ವಾನಿಸಿ ರೈತನ ಸಾಧನೆಯ ಬಗ್ಗೆ ಬೆಳಕು ಚೆಲ್ಲಲಾಗುತ್ತದೆ. ಇದು ಟಿ.ಆರ್.ಪಿ ಆಧಾರಿತ ಕಾರ್ಯಕ್ರಮವಲ್ಲ. ರೈತರ ಬವಣೆಗಳನ್ನು ಅನಾವರಣಗೊಳಿಸುವ ನೈಜ ಸರಣಿಯಾಗಿದೆ' ಎಂದರು.

ಚಂದನ ವಾಹಿನಿಯ ಕಾರ್ಯಕ್ರಮ ವಿಭಾಗದ ಮುಖ್ಯಸ್ಥೆ ಎಚ್.ಎನ್. ಆರತಿ ಮಾತನಾಡಿ, 'ಈ ಸರಣಿಯಲ್ಲಿ ಪಾಲ್ಗೊಳ್ಳುವ 26 ರೈತ ಸಾಧಕರಲ್ಲಿ ಮೂವರನ್ನು 'ರೈತ ರತ್ನ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗುತ್ತದೆ' ಎಂದು ಹೇಳಿದರು.